ತಾನೆ... ಅಲ್ಲಿಗೂ ಸಾಲಗಾರರು ದಾಳಿಯಿಟ್ಟ ಅವಶೇಷಗಳು ಗೋಚರಿಸಿದವು. ಚರಿಗೆ ನೀರೂ ದಕ್ಕಿಸಿಕೊಳ್ಳದ ಸಿಟ್ಟಿಗೆ ಆ ಹಳೆಯ ಮನೆಗೆ ಮಣ್ಣುತೂರಿ ಆಗಷ್ಟೆ ಯಾರದ್ದೋ ಹೊಲದಿಂದ ಚಿಕ್ಕಪ್ಪನ ಕುಟುಂಬ ಆಯ್ದು ತಂದಿದ್ದ ಮೆಕ್ಕೆಜೋಳದ ಚೀಲ ಹಿಡಿದಳು, ಅವನ ಮೇಲೆ ಹೊರಿಸಿಕೊಂಡು ನಡೆದಳು. ಕ್ರಮೇಣ ಈ ದಬ್ಬಾಳಿಕೆ ಕೆಲಸ ಮಾಡುತ್ತಾ ಅದು ರೂಢಿಯಂತಾಯಿತು. ಎಲ್ಲದಕ್ಕೂ ತಾಯಿ–ಮಗ ಒಗ್ಗಿಕೊಳ್ಳತೊಡಗಿದ್ದರು. ತಿಂಗಳಿಗೊಮ್ಮೆ ಅಪ್ಪನೂರಿಗೆ ಹೋಗಿ ತರಕಾರಿ, ಸೊಪ್ಪು, ಕಾಳುಕಡಿ, ಹಾಲು–ಮೊಸರು ಸಿಕ್ಕಿದ್ದನ್ನು ತರತೊಡಗಿದರು. ಅವನಮ್ಮ ಗಲ್ಲಿಯ ಜನರಿಗೆ 'ಜವಾರಿ' ಅಂತಾ ಲೇಬಲ್ಲು ಹಚ್ಚಿ ಮಾರುತ್ತಿದ್ದಳು. ಎಲ್ಲವೂ ಮಾರುವ ವಸ್ತುಗಳಂತೆ ಅವಳಿಗೆ ಕಾಣತೊಡಗಿದ್ದು ಅವನಿಗೆ ವಿಚಿತ್ರವೆನಿಸಿತ್ತು. ಏನಾದರೂ ಮಾಡಿ ನಾಕುಪೈಸೆ ಕಲೆ ಹಾಕುತ್ತಿದ್ದಳು. ಹೀಗೆ ಜೀವನ ಮತ್ತೊಂದು ಹಳಿಯ ಮೇಲೆ ಹೀನಾಯ ಸ್ಥಿತಿಯನ್ನು ನುಂಗಿಕೊಳ್ಳುತ್ತ ದಾಟಿಕೊಳ್ಳತೊಡಗಿತ್ತು.

ಅಪ್ಪನ ಅಂಕುಶದ ಭಯ ಕರಗಿ ಹೋದ ಮೇಲೆ ಅಮ್ಮ ಭಿನ್ನವಾದ ವ್ಯಕ್ತಿತ್ವ ತಾಳತೊಡಗಿದಳು. 'ಭಟ್ಟಿ ಬಿದ್ದವರಿಗೆ' ನೀವಿ ಭಟ್ಟಿ ಇಳಿಸುತ್ತಿದ್ದಳು, ಅವರಿವರ ಗುಪ್ತ ವಿಚಾರಗಳನ್ನು ಹುಡುಕಿ ತೆಗೆದು, ಮಾತಾಡಿ ಅವತ್ತಿನ ಜೋಳದ ಮುದ್ದೆಗೆ ಹಸಿಮೆಣಸಿನಕಾಯನ್ನೋ, ಬದನೆಕಾಯನ್ನೋ, ಟೊಮೆಟೊವನ್ನೋ ಗಿಟ್ಟಿಸಿ ಸೆರಗಿನಲ್ಲಿ ಕಟ್ಟಿಕೊಂಡು ಬರುತ್ತಿದ್ದಳು.

ಶಾಲೆಯ ಸಮಯವೆಲ್ಲ ವ್ಯರ್ಥವಾಗಿ ಹೋಗುತ್ತಿರುವ ಸಂಕಟ ಕ್ರಮೇಣ ಕಾಲದ ಚಕ್ರಕ್ಕೆ ಕರಗಿ ರವಿಕಾಂತ ಇಲ್ಲಸಲ್ಲದ ಯೋಚನೆ–ಚಿಂತನೆ–ಸಹವಾಸಕ್ಕೆ ಬಿದ್ದ. ಅದೇ ಸಮಯಕ್ಕೆ ದುರ್ಗದ ಕೆಲವೊಂದು ಜಾಗಗಳಲ್ಲಿ ಪ್ರಾಯಕ್ಕೆ ಬಂದ ಹುಡುಗ ಹುಡುಗಿಯರು ಅಪ್ಪಅಮ್ಮ ಆಟ ಆಡುವುದನ್ನು ಕದ್ದು ನೋಡುವ ಚಟವೂ ಹತ್ತಿಬಿಟ್ಟಿತ್ತು. ಈ ವಿಷಯ ವಿಪರೀತ ವಿಷಯಾಸಕ್ತಿ ಮೂಡಿಸಿ, ಸೂಳೆಗಾರಿಕೆಯ ತಾವುಗಳನ್ನೆಲ್ಲ ಪರಿಚಯಿಸಿಬಿಟ್ಟಿತು. ಜೊತೆಗೆ ಆಡಿಬೆಳೆದ ಒಂದಿಬ್ಬರು ಹುಡುಗಿಯರು ಅತ್ತ ಓಡಾಡಿದ್ದನ್ನು ನೋಡಿದ್ದೇ ಸ್ವಲ್ಪವೇ ಉಳಿದಿದ್ದ ಮುಗ್ಧತೆಯ ಪೊರೆಯೂ ಕಳಚಿಬಿಟ್ಟಿತು.

ಹಳೆತಲೆಗಳ ಮುಖಾಮುಖಿಯಾದಾಗೆಲ್ಲ 'ಕರಿಸಿದ್ದಯ್ಯನ ಮಗ... ಅದೇ ತಲೆಮರ್ಸಕಂಡು ಸಾಲಗಾರರಿಗೆಲ್ಲ ನಾಮ ಬಳದೋದ್ನಲ್ಲ ಅವ್ನ ಮಗ...' ಅಂತೆಲ್ಲ ಅಂದದ್ದಲ್ಲದೇ ಅವನ ಅಮ್ಮನ ಬಗ್ಗೆಯೂ ಕಳ್ಳಸನ್ನೆಯಾಡಿ ನಡೆದಾಗೆಲ್ಲ, ನನ್ನಮ್ಮನೂ ಏನೋ ಮಸಲತ್ತು ಮಾಡ್ತಾ ಇದ್ದಾಳೆ ಅಂತಾ ಕಳವಳಕ್ಕೆ ಬಿದ್ದ. ಇವನು ಇವಳನ್ನ ಇಟ್ಕಂಡಾನೆ, ಅವಳು ಇವನ ಇಟ್ಕಂಡಾಳೆ ಅಂತೆಲ್ಲಾ ಹುಡುಗರ ಮುಂದೆ ಎಗ್ಗಿಲ್ಲದೆ ಮಾತನಾಡುತ್ತಿದ್ದವನ ಬಾಯಿ ಕಟ್ಟಿಬಿಟ್ಟಿತ್ತು. ಎಲ್ಲಿ ಅವಳನ್ನು ಆ ಸಂಧಿಗೊಂದಿಗಳಲ್ಲಿ ಕಮಟು ಕೋಣೆಗಳಲ್ಲಿ ಕಂಡು ಬಿಡುತ್ತೇನೋ ಅನ್ನುವ ಭಯ ಅವನ ಇನ್ನಿಲ್ಲದಂತೆ ತಿನ್ನತೊಡಗಿತ್ತು.

ಖಾಲಿ ಹೊತ್ತು ಪೇಟೆಯ ಗುಜರಿ ಅಂಗಡಿಯ ಸ್ನೇಹಿತ ಜಲೀಲನ ಜೊತೆ ಕೂತಿರುತ್ತಿದ್ದವನಿಗೆ ಬೀದಿಸುತ್ತುವ ಹುಡುಗರು ಯಾರ್‍ಯಾರದ್ದೋ ಮನೆ ಮುಂದಿರುತ್ತಿದ್ದ ಕಬ್ಬಿಣದ ಬಕೀಟು, ನಲ್ಲಿ, ಹಳೆ ಸೈಕಲ್ಲು ಇತ್ಯಾದಿಗಳನ್ನು ತಂದು ಮಾರಿ ಹತ್ತು–ಇಪ್ಪತ್ತು ರೂಪಾಯಿ ದುಡಿಮೆ ಮಾಡುತ್ತಿದ್ದುದು ಕಂಡು ಅವನಿಗೆ ನಾನ್ಯಾಕೆ ಈ ದುಡಿಮೆ ಮಾಡಬಾರದೆಂದು ಅನಿಸಿಬಿಟ್ಟಿತ್ತು. ಅದಕ್ಕೆ ಸರಿಯಾಗಿ ಅನಾಥವಾಗಿ ಬಿದ್ದಿರುತ್ತಿದ್ದ ವಸ್ತುಗಳೇ ಗೋಚರಿಸತೊಡಗಿದವು. ಭಯ ಮಾಯವಾಗಿ ರಾತ್ರಿ ಆಳಕ್ಕೆ ಇಳಿದಂತೆ ಜೇಬಿನಲ್ಲಿ ಚಿಲ್ಲರೆ ಬದಲಿಗೆ ನೋಟುಗಳು ನಿರಾಯಾಸವಾಗಿ ಆಡತೊಡಗಿದವು. ಹದಿನೆಂಟು–ಇಪ್ಪತ್ತರ ಪ್ರಾಯದಲ್ಲಿ ಸ್ಕೂಲನ್ನೂ, ಸೂಳೆಮನೆಗಳಲ್ಲಿ ತಾಯಿಯನ್ನು ಕಂಡುಬಿಡುವ ಭಯವನ್ನೂ ಮರೆತು ಬದುಕುತ್ತಿದ್ದ ಚಿಗುರು ಮೀಸೆಯ ರವಿಕಾಂತನಿಗೆ ಬೆಚ್ಚಿಬೀಳುವ ದೃಶ್ಯ ಕಾಣಿಸಿತ್ತು.